	1997-98		
1.	Kumbarbada Masjid, Jamath (Sunni) Kumbargalli, Hubli.	Re-Construction of Mosque	Rs. 50,000.00
2.	Baitulmal Masjid, Keshwapur, Hubli	Re-Construction of Mosque	Rs. 25,000,00
		Total	**Rs. 1,55,000.00**

ಹುಬ್ಬಳ್ಳಿ ನಗರದಲ್ಲಿ ಅಪರಾಧ ಪ್ರಕರಣಗಳ ಹೆಚ್ಚಳ

643 (782) ಶ್ರೀ ಅಶೋಕ ಶಂಕರ್ ಕಾಟ್ವೆ (ಹುಬ್ಬಳ್ಳಿನಗರ) : ಮಾನ್ಯ ಗೃಹ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ನಗರ ಇತ್ತೀಚೆಗೆ ಸುಲಿಗೆ ದರೋಡೆ ಅಪಹರಣ ಹಿಂಸೆ ದಿನದಿನಕ್ಕೂ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಪಿ.ಜಿ.ಆರ್ ಸಿಂಧ್ಯ (ಗೃಹ ಸಚಿವರು)

ಅ) 1996, 1997, 1998 ಮತ್ತು 1999 (ದಿನಾಂಕ : 12-3-99ರವರೆಗೆ) ಹುಬ್ಬಳ್ಳಿ ನಗರದಲ್ಲಿ ವರದಿಯಾದ ಸುಲಿಗೆ, ದರೋಡೆ, ಅಪಹರಣ ಮತ್ತು ಹಿಂಸೆಯ ಪ್ರಕರಣಗಳು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಅಪರಾಧ ಶೀರ್ಷಿಕೆ	1996	1997	1998	1999 (ದಿ: 13-3-99 ರವರೆಗೆ)
1.	ಸುಲಿಗೆ	15	16	12	1
2.	ದರೋಡೆ	1	1	1	-
3.	ಅಪಹರಣ	6	9	8	-
4.	ಹಿಂಸೆ	133	180	155	34

ಆ) ಮೇಲಿನ ಅಂಕಿ ಅಂಶಗಳಲ್ಲಿ ನೋಡಿದಾಗ ಅಪರಾಧಗಳಲ್ಲಿ ಅಂತಹ ಹೆಚ್ಚಳ ಕಂಡು ಬರುವುದಿಲ್ಲ. ಈ ಕೆಳಕಂಡ ಕ್ರಮಗಳ ಮೂಲಕ ಅಪರಾಧಗಳನ್ನು ತಡೆಗಟ್ಟಲಾಗುತ್ತಿದೆ.

1. ವೈಜ್ಞಾನಿಕ ಸಹಾಯದೊಡನೆ ಕಾರ್ಯಪ್ರವೃತ್ತಿಯನ್ನು ಬಲಪಡಿಸಲು ಅವಿರ ತಪ್ರಯತ್ನವನ್ನು ಕೈಗೊಳ್ಳಲಾಗುತ್ತಿದೆ.

2. ಪೋಲೀಸ್ ಗಸ್ತನ್ನು ಬಿಗಿಗೊಳಿಸಲಾಗಿದೆ.

3. ಮಾಜಿ ಖೈದಿಗಳ ಹಾಗೂ ಎಂ. ಒ. ಬಿ. ಖೈದಿಗಳ ಮೇಲೆ ತೀವ್ರ ನಿಗಾ ವಹಿಸಿದೆ.

4. ದರೋಡೆ ಪ್ರತಿಬಂಧಕ ಯೋಜನೆಗಳನ್ನು ಜಾರಿಗೆತರಲಾಗಿದೆ.

5. ಓ. ವಿ ಮತ್ತು ತಲೆ ಮರೆಸಿಕೊಂಡ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಅವಿರತ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ.

6. ನೆರೆ-ಹೊರೆ ಕಾವಲು ಸಮಿತಿಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

7. ವಿಶೇಷ ಪೋಲೀಸ್ ಕಾರ್ಯಾಚರಣೆಯ ದಳಗಳನ್ನು ಚುರುಕುಗೊಳಿಸಲಾಗಿದೆ.

8. ಅವಶ್ಯವಾದಲ್ಲಿ ವ್ಯಕ್ತಿಗಳಿಗೆ ರಕ್ಷಣೆಯನ್ನು ನೀಡಲಾಗುತ್ತಿದೆ.

ಗೋರೂರು ಅಣೆಕಟ್ಟು ಸಂತ್ರಸ್ತರಿಗೆ ಪುರರ್ವಸತಿ

645 (942) ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋರೂರು ಅಣೆಕಟ್ಟು ಕಟ್ಟುವಾಗ ಮುಳುಗಡೆಯಾದ ಗ್ರಾಮಗಳು ಯಾವುವು? (ಸಂಪೂರ್ಣ ಮತ್ತು ಅರ್ಧ ಮುಳುಗಡೆಯಾದ ವಿವರ)

ಆ) ಮುಳುಗಡೆಯಾದ ಜನರಿಗೆ ಪುನರ್ವಸತಿ ಒದಗಿಸಲಾಗಿದೆಯೆ; ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು?

ಇ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಈ ಅಣೆಕಟ್ಟಿನಿಂದ ಶೀತ ಪ್ರದೇಶವೆಂದು ಘೋಷಿಸಲಾದ ಹಳ್ಳಿಗಳು ಯಾವುವು? ಈ ಹಳ್ಳಿಯಲ್ಲಿ ಯಾವ ಪರಿಹಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ) ಗೋರೂರು ಅಣೆಕಟ್ಟು ಪ್ರದೇಶದ ಕಾಮಗಾರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ತಾಲ್ಲೂಕುವಾರು ಹಣ ಬಿಡುಗಡೆ ವಿವರ ಒದಗಿಸುವುದು)

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಸಂಪೂರ್ಣವಾಗಿ ಮುಳುಗಡೆಯಾದ ಗ್ರಾಮ ಗಳು 46 ಹಾಗೂ ಭಾಗಶಃ ಮುಳುಗಡೆಯಾದ ಗ್ರಾಮಗಳು 126. Number of sub-merging villages 46 and partially submerging village 126.